## ದಿನಾಂಕ 11-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್.ಸಿ.ಎಂ. ರವರಿಂದಃ-**

ಪ್ರತಿವಾದಿಯರ ಪೂರ್ವಜರು ಕರಾರು ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯರ ಮಧ್ಯೆ ಯಾವುದೇ ಮಾತುಕತೆ ಆಗಿಲ್ಲ ಎಂದರೆ ಸಾಕ್ಷಿಯು ಗೌಡಪ್ಪ ಮತ್ತು ಅಣ್ಣಪ್ಪ ರವರೊಂದಿಗೆ ಮಾತುಕತೆ ಆಗಿ ಕರಾರು ಪತ್ರ ಆಗಿತ್ತು ಎನ್ನುತ್ತಾರೆ . ನನ್ನ ಮತ್ತು ಗೌಡಪ್ಪ ಮತ್ತು ಅಣ್ಣಪ್ಪ ರವರೊಂದಿಗೆ ಮಾತುಕತೆ ಕರಾರು ಪತ್ರ ಆಗುವ ಒಂದು ತಿಂಗಳ ಮೊದಲು ಆಗಿತ್ತು, ಕರಾರು ಪತ್ರ ದಿನಾಂಕ 25.06.2003 ರಲ್ಲಿ ಆಗಿದೆ ಎನ್ನುತ್ತಾರೆ. ಕರಾರು ಪತ್ರ ಆಗುವ ಸಂದರ್ಭದಲ್ಲಿ ದಾವಾ ಸ್ವತ್ತಿನ ಉತಾರದಲ್ಲಿ ಯಾರ ಹೆಸರು ಇರುತ್ತದೆ ಎಂದು ದಾಖಲಾತಿಗಳನ್ನು ಪರಶೀಲಿಸಿರುತ್ತೀರಾ ಎಂದರೆ ಸಾಕ್ಷಿಯು ಅವರು ಅದು ಜಂಟಿ ಸ್ವತ್ತು ಎಂದು ನನಗೆ ಉತಾರ ತೋರಿಸಿದ್ದರು ಎನ್ನುತ್ತಾರೆ. ಸರ್ವೆ ನಂ.121 ರಲ್ಲಿ 11 ಹಿಸ್ಸೆಗಳು ಇವೆ. ಸರ್ವೆ ನಂ.121/10 ಹಿಸ್ಸೆ ಎಲ್ಲಿ ಬರುತ್ತದೆ ಎಂದು ನೋಡಿದ್ದೀರಾ ಎಂದರೆ ಸಾಕ್ಷಿಯು ನಾನು ಆ ಸರ್ವೆ ನಂಬರಿನ ಪಿಟಿ ಶೀಟನ್ನು ನೋಡಿದ್ದೇನೆ ಮತ್ತು ಸದರಿ ಸ್ವತ್ತಿಗೆ ಭೇಟಿ ನೀಡಿ ನೋಡಿದ್ದೆ ಎನ್ನುತಾರೆ. ಸರ್ವೆ ನಂ.121 ರ ಎಲ್ಲಾ 11 ಹಿಸ್ಸೆಗಳ ಪಿಟಿ ಶೀಟನ್ನು ನಾನು ನೋಡಿದ್ದೆ. 11 ಹಿಸ್ಸೆಗಳ ಉತಾರಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿಯು ಸರ್ವೆ ನಂ.121/10 ರ ಉತಾರ ಮಾತ್ರ ನೋಡಿದ್ದೆ ಎನ್ನುತ್ತಾರೆ . ಸರ್ವೆ ನಂ .121/10 ರ ಉತಾರವನ್ನು ಹೊರತುಪಡಿಸಿ ಬೇರೆ ಹಿಸ್ಸೆಗಳ ಉತಾರಗಳನ್ನು ನೋಡಿಲ್ಲ ಎಂದರೆ ಸರಿ. ಸರ್ವೆ ನಂ.121 ರಲ್ಲಿ ಎಲ್ಲಾ ಹಿಸ್ಸೆಗಳು ಪಾಲುವಾಗಿತ್ತೋ ಇಲ್ಲವೋ ಎಂದು ನೋಡಿದ್ದೀರಾ ಎಂದರೆ ಸಾಕ್ಷಿಯು ಅದು ಜಂಟಿಯಾಗಿದೆ ಎಂದು ತಿಳಿಸಿದ್ದರು ಎನ್ನುತ್ತಾರೆ.

**2.** ಸರ್ವೆ ನಂ.121 ರ ಒಟ್ಟು ಕ್ಷೇತ್ರ ನನಗೆ ಗೊತ್ತಿಲ್ಲ, ಸರ್ವೆ ನಂ.121/10 ರ ಕ್ಷೇತ್ರ ಮಾತ್ರ ನನಗೆ ಗೊತ್ತು, ಅದು 21 ಗುಂಟೆ ಇದೆ, ಅದರಲ್ಲಿ 3 ಗುಂಟೆ ರಸ್ತೆಗೆ ಹೋಗಿದೆ, ಉಳಿದ 18 ಗುಂಟೆಯಲ್ಲಿ ನಮಗೆ 5 ಗುಂಟೆಯನ್ನು ಅಣ್ಣಪ್ಪ ಮತ್ತು ಗೌಡಪ್ಪ ರವರು ಬರೆದುಕೊಟ್ಟಿದ್ದಾರೆ ಎನ್ನುತ್ತಾರೆ. ಕರಾರು ಪತ್ರವಾದ ದಿನದಿಂದ ಸರ್ವೆ ನಂ.121/10 ರಲ್ಲಿ 21 ಗುಂಟೆ ಈಗಲೂ ಇದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಉತಾರ ಇದೆ, ಅದನ್ನು ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ನನಗೆ ಕನ್ನಡ ಓದಲು ಬರುವುದಿಲ್ಲ. ಸರ್ವೆ ನಂ.121/10 ರಲ್ಲಿ 21 ಗುಂಟೆ ಇದೆ ಎಂದು ತೋರಿಸಲು ನಾನು ನಿಪಿ-35 ನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ಆ ಉತಾರದಲ್ಲಿ ಗೌಡಪ್ಪ ಮತ್ತು ಅಣ್ಣಪ್ಪನಿಗೆ 21 ಗುಂಟೆ ಇರಲಿಲ್ಲ ಎಂದರೆ ಸಾಕ್ಷಿಯು ಉತಾರದಲ್ಲಿ ಇರುವುದನ್ನು ನೋಡಿಯೇ ಕರಾರು ಪತ್ರ ಮಾಡಿಕೊಳ್ಳಲಾಗಿದೆ ಎನ್ನುತ್ತಾರೆ. ಆ ಉತಾರದ ಪ್ರಕಾರ 2002 ರಲ್ಲಿ 10 ಗುಂಟೆ ಜಮೀನನ್ನು ಅವರು ಜಮಾದಾರ್ ರವರಿಗೆ ಮಾರಿದ್ದರು . ಕರಾರು ಪತ್ರದಲ್ಲಿ ಸದರಿ ಸರ್ವೆ ನಂ.121/10 ರಲ್ಲಿ 10 ಗುಂಟೆಯನ್ನು ಮಾರಾಟ ಮಾಡಿದ್ದಾರೆ ಎಂದು ಉಲ್ಲೇಖ ಮಾಡಿದ್ದಾರಾ ಎಂದರೆ ಸಾಕ್ಷಿಯು ಮಾಡಿರಬಹುದು ಎನ್ನುತ್ತಾರೆ. 2003 ರಲ್ಲಿ ಗೌಡಪ್ಪ ಮತ್ತು ಅಣ್ಣಪ್ಪ ರವರು 21 ಗುಂಟೆ ಜಮೀನಿಗೆ ಮಾಲೀಕರು ಇರಲಿಲ್ಲ ಎಂದರೆ ಸಾಕ್ಷಿಯು ಮಾಲೀಕರು ಇದ್ದರು ಎನ್ನುತ್ತಾರೆ.

**3.** ಕರಾರು ಪತ್ರವನ್ನು ಬರೆಯಲು ಮಾಹಿತಿಯನ್ನು ಗೌಡಪ್ಪ ಮತ್ತು ಅಣ್ಣಪ್ಪ ರವರೇ ಕೊಟ್ಟಿದ್ದಾರೆ. ಕರಾರು ಪತ್ರವನ್ನು ಬಾಂಡ್ ರೈಟರ್ ರವರು ಬರೆದು ದಸ್ತೂರ ಸಹಿ ಮಾಡಿದ್ದಾರೆ. ಬಾಂಡ್ ರೈಟರ್ ರವರು ಕರಾರು ಪತ್ರವನ್ನು ಬರೆಯುವ ಮೊದಲು ಟಿಪ್ಪಣಿ ಬರೆದುಕೊಂಡಿದ್ದರೇ ಎಂದು ಪ್ರಶ್ನಿಸಿದರೆ ಸಾಕ್ಷಿಯು ಬರೆದಿರಬಹುದು, ಆದರೆ ನಾನು

ನೋಡಿಲ್ಲ ಎನ್ನುತ್ತಾರೆ. ಬಾಂಡ್ ರೈಟರ್ ರವರಿಗೆ ಗೌಡಪ್ಪ ಮತ್ತು ಅಣ್ಣಪ್ಪ ರವರು ಉತಾರವನ್ನು ತೋರಿಸಿ ಕರಾರು ಪತ್ರವನ್ನು ಬರೆಸಿದ್ದಾರೆ. 18 ಗುಂಟೆ 10 ಗುಂಟೆ ಮಾರಿದರೆ 8 ಗುಂಟೆ ಉಳಿಯುತ್ತದೆ ಎಂದರೆ ಸರಿ. ಕರಾರು ಪತ್ರದಲ್ಲಿ 8 ಗುಂಟೆ ಉಳಿದಿದ್ದು ಅದರಲ್ಲಿ 5 ಗುಂಟೆ ಮಾರಾಟ ಮಾಡುತ್ತಿದ್ದೇವೆ ಎಂದು ಬರೆದಿಲ್ಲ ಎಂದರೆ ಸಾಕ್ಷಿಯು ಬರೆದಿದ್ದಾರೆ ಎನ್ನುತ್ತಾರೆ. ನಾನು 8 ಗುಂಟೆ ಜಮೀನನ್ನು ನೋಡಲು ಹೋದಾಗ ಅಲ್ಲಿ ಜಮಾದಾರ್ ರವರೂ ಸಹ ಇದ್ದರು. ಜಮಾದಾರ್ ರವರ ಜಾಗ ಕರಾರು ಪತ್ರ ಮಾಡಿಕೊಳ್ಳುವ ಜಾಗದ (ದಾವಾ ಸ್ವತ್ತು) ಉತ್ತರಕ್ಕೆ ಇತ್ತು ಎನ್ನುತ್ತಾರೆ. ಪಶ್ಚಿಮಕ್ಕೆ ಖಾಲಿ ಜಾಗ, ಪೂರ್ವಕ್ಕೆ ರಸ್ತೆ, ದಕ್ಷಿಣಕ್ಕೆ ಶಂಕರ್ ಚೌಬಾರಿ ರವರ ಮನೆ ಇದೆ. ಈಗ ನಾನು ಹೇಳಿದ ಚೆಕ್ಕುಬಂಧಿ ಸದರಿ 8 ಗುಂಟೆ ಜಾಗಕ್ಕೆ ಸಂಬಂಧಿಸಿದೆ. ಅದೇ ಚೆಕ್ಕುಬಂಧಿ ಕರಾರು ಮಾಡಿಕೊಳ್ಳುವ ಸಮಯದಲ್ಲಿತ್ತು. ಅದು 8 ಗುಂಟೆಯ ಚೆಕ್ಕುಬಂಧಿ ಎಂದು ಕರಾರು ಪತ್ರದಲ್ಲಿ ಉಲ್ಲೇಖವಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**